**ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ,**

**ರೋಣ**

ಸಿ.ಸಿ. ನಂ.1080/2020

ಸಿ.ಡಬ್ಲೂಃ 1 ಪಿ.ಡಬ್ಲೂಃ 1

ಹೆಸರುಃ ಶಾರವ್ವ

ಗಂಡನ ಹೆಸರುಃ ಬಸಪ್ಪ ಚಲವಾದಿ

ವಯಸ್ಸುಃ 45 ವರ್ಷ

ಉದ್ಯೋಗಃ ಮನೆಗೆಲಸ

ವಿಳಾಸಃ ಮುದೇನಗುಡಿ ತಾಃ ರೋಣ

**ಸಾಕ್ಷಿಯನ್ನು ಸತ್ಯ ಪ್ರತಿಜ್ಞೆಯ ಮೇರೆಗೆ ಇಂದು ದಿನಾಂಕಃ 10/02/2023 ರಂದು ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲುಃ- ಆರೋಪಿತರ ಪರ ಶ್ರೀ. ಪಿ ಕೆ ಯು ವಕೀಲರಿಂದಃ**

1. ಮುದೇನಗುಡಿಯಲ್ಲಿರುವ 19 ಗುಂಟೆ ಜಮೀನು 3 ಮತ್ತು 5 ನೇ ಆರೋಪಿತರಿಗೆ ಸೇರಿದ್ದು ಎಂದರೆ ನಿಜ. ಆರೋಪಿತರು 2 ಗುಂಟೆ ಜಾಗದಲ್ಲಿ ಮನೆ ಕಟ್ಟಿಸಿಕೊಂಡಿದ್ದಾರೆ ಎಂದರೆ ಸಾಕ್ಷಿ ನಮ್ಮ ಮತ್ತು ಅವರ ಮನೆ ಎರಡು ಇವೆ , ಬಾಗಿಲು ಪೂರ್ವಕ್ಕೆ ಇವೆ ಎಂದು ಹೇಳುತ್ತಾರೆ. ಅಲ್ಲಿ 2 ಮನೆಗಳು ಅಕ್ಕ ಪಕ್ಕದಲ್ಲಿ ಇವೆ ಎಂದು ಹೇಳುತ್ತಾರೆ. ಅಲ್ಲಿ ನಿಮ್ಮ ಮನೆ ಇಲ್ಲ ಎಂದರೆ ಸಾಕ್ಷಿ ಎಡಗಡೆ ನಮ್ಮ ಮನೆ ಮತ್ತು ಬಲಗಡೆ ಆರೋಪಿತರ ಮನೆ ಇದೆ ಎಂದು ಹೇಳುತ್ತಾರೆ. ನಮ್ಮ ಮನೆಯ ನಂಬರ ನನಗೆ ಗೊತ್ತಿಲ್ಲ, ಕಾರಣ ನಾನು ಶಾಲೆ ಕಲಿತಿಲ್ಲ. 2 ಗುಂಟೆ ನಾವು ಖರೀದಿ ಮಾಡಿದ ಬಗ್ಗೆ ನಮ್ಮ ಹತ್ತಿರ ಖರೀದಿ ಕಾಗದ ಪತ್ರ ಇದೆ, ಅದಕ್ಕೆ ಊರಿನ ಮುಖಂಡರು ಸಹಿ ಮಾಡಿದ್ದಾರೆ ಎಂದು

ಹೇಳುತ್ತಾರೆ. ಆ ಮನೆಯ ಉತಾರ ಹಾಜರು ಮಾಡಿದ್ದೇನೆ. ಪಂಚಾಯತಿಯಿಂದ ನನಗೆ ಆ ಮನೆ ಹಾಕಿಸಿಕೊಟ್ಟಿದ್ದಾರೆ. ಪಂಚಾಯಿತಿಂದ ಮನೆ ಕಟ್ಟಿಸಿಕೊಟ್ಟಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿ ಅಲ್ಲ. ಮನೆ ಕಟ್ಟಿಸಿಕೊಟ್ಟ ಬಗ್ಗೆ ನನ್ನ ಹತ್ತಿರ ಮನೆ ಮಂಜೂರು ಪತ್ರ ಇದೆಯೇ ಎಂಬ ಪ್ರಶ್ನೆಗೆ ಸಾಕ್ಷಿ ನನ್ನ ಅತ್ತೆಯ ಹೆಸರಿಗೆ ಮನೆ ಮಂಜೂರು ಆಗಿತ್ತು, ನನ್ನ ಅತ್ತೆಗೆ ಕೇಳುತ್ತೇನೆ ಎಂದು ಹೇಳುತ್ತಾರೆ. ಸಿದ್ದವ್ವ ನಮಗೆ 2 ಗುಂಟೆ ಜಾಗ ಖರೀದಿ ಕೊಟ್ಟಿದ್ದಾರೆ ಎಂದು ಖೊಟ್ಟಿ ಕಾಗದ ಸೃಷ್ಟಿ ಮಾಡಿ ನಾವು ಅಸಲು ದಾವೆ ನಂ.190/2020 ರಂತೆ ದಾವೆ ಮಾಡಿದ್ದೇವೆ ಎಂದರೆ ನಿಜ. ಸಿದ್ದವ್ವ ಆ ದಾವೆಯಲ್ಲಿ ತಾನು ಯಾವುದೇ ಕಾಗದ ಪತ್ರ ಬರೆದುಕೊಟ್ಟಿಲ್ಲ , ಅದರಲ್ಲಿ ಇರುವ ಸಹಿ ತನ್ನದು ಅಲ್ಲ ಎಂದು ತಕರಾರು ಹಾಕಿದ್ದಾಳೆ ಎಂದರೆ ನಿಜ. ಈ ರೀತಿ ಸುಳ್ಳು ಪಿರ್ಯಾಧಿ ಕೊಟ್ಟರೆ ಆರೋಪಿತರು ಹೆದರಿ, ಮನೆ ಬಿಡಬಹುದು ಎಂದು ಸುಳ್ಳು ದೂರು ಕೊಟ್ಟು, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿ ಅಲ್ಲ. ಘಟನೆ ಆದ ತಾರೀಖು , ತಿಂಗಳು ನನಗೆ ನೆನಪಿಲ್ಲ. ಘಟನೆಯ ಚೆಕ್ಕುಬಂದಿ ನನಗೆ ಹೇಳಲು ಬರುವುದಿಲ್ಲ. ಸಿದ್ದವ್ವ ಖರೀದಿ ಕೊಟ್ಟ ಜಾಗದಲ್ಲಿ ನಾನು ಮನೆ ಕಟ್ಟಿಸಿಕೊಂಡಿದ್ದೇನೆ , ಅದು ಒಂದು ಗುಂಟೆ ಆಗುತ್ತದೆಯೋ ಅಥವಾ ಎರಡು ಗುಂಟೆ ಆಗುತ್ತದೋ ಎಂದು ನನಗೆ ಗೊತ್ತಿಲ್ಲ. ಖರೀದಿ ಕೊಡುವಾಗ 2 ಗುಂಟೆ ಜಾಗ ಎಂದು ಅಳತೆ ಮಾಡಿ ಕೊಟ್ಟಿದ್ದಾರೆ. ನನ್ನ ಗಂಡ ಸಿವಿಲ್ ದಾವೆ ಏನು ಮಾಡಿದ್ದಾನೆಂದು ನನಗೆ ಗೊತ್ತಿಲ್ಲ. ನನ್ನ ಗಂಡ 2 ಗುಂಟೆ ಜಾಗವನ್ನು ಖರೀದಿ ಮಾಡಿಕೊಡಬೇಕು ಎಂದು ಕೋರ್ಟಗೆ ದಾವೆ ಮಾಡಿದ್ದಾನೆ ಎಂದರೆ ನಿಜ. ಖರೀದಿ ಗೆ

ಮಾತುಕತೆ ಆದಾಗ 11,000/- ಕ್ಕೆ ಒಂದು ಗುಂಟೆಯಂತೆ ಮಾತುಕತೆ ಆಗಿದ್ದು, ರೂ.16000/- ನಾವು ಕೊಟ್ಟಿದ್ದೇವೆ , ಉಳಿದ ಹಣ ದಾರಿ ಆದ ನಂತರ ಕೊಡುತ್ತೇವೆ ಎಂದು ಮಾತು ಕತೆ ಆಗಿತ್ತು ಎಂದು ಹೇಳುತ್ತಾರೆ. ಆ ರೀತಿ ಯಾವುದೇ ಮಾತು ಕತೆ ಆಗಿಲ್ಲ ಎಂದರೆ ಸರಿ ಅಲ್ಲ. ನಾನು ಪಿರ್ಯಾಧಿಯಲ್ಲಿ 2 ಗುಂಟೆ ಖರೀದಿ ಕೊಟ್ಟಿದ್ದರೂ ಹಾಗೂ ನಾವು ರೂ.16000/- ಕೊಟ್ಟ ಬಗ್ಗೆ ದೂರಿನಲ್ಲಿ ಬರೆಸಿಲ್ಲ. ನಮ್ಮ ಮನೆಯ ಬಾಜು ಪೂರ್ವಕ್ಕೆ ಓಣಿ ಇದೆ ಎಂದರೆ ಸಾಕ್ಷಿ ಸ್ವಲ್ಪ ದೂರಿದಲ್ಲಿ ಇದೆ ಎಂದು ಹೇಳುತ್ತಾರೆ. ಅಲ್ಲಿ ಜಗಳ ಆದಾಗ ಜನ ಕೂಡಿದ್ದರು. ಆರೋಪಿತರಿಗೆ ನಾವು ಹೊಡೆದಿಲ್ಲ , ಹಾಗೂ ನಮಗೆ ಆರೋಪಿತರು ಹೊಡೆದಿಲ್ಲ, ಬರೀ ಬಾಯಿ ಮಾತಿನಿಂದ ಜಗಳ ಆಯಿತು. ಆರೋಪಿತರು ಅವಾಚ್ಯವಾಗಿ ಬೈದಾಡಿದರೂ , ಆದರೇ ಜೀವದ ಬೆದರಿಕೆ ಹಾಕಿಲ್ಲ . ಜಾಗ ಬಿಟ್ಟು ಹೋಗು ಎಂಬ ಶಬ್ಧ ಬಿಟ್ಟು, ಬೇರೆ ಯಾರು ಯಾವುದೇ ಬೈಗುಳ ಬೈದಿಲ್ಲ. ನಾವು ಸಹ ಯಾವುದೇ ಅವಾಚ್ಯವಾಗಿ ಬೈದಿಲ್ಲ. ಆರೋಪಿತರು ನಮ್ಮ ವಿರುದ್ಧ ಅವರ ಜಾಗದಲ್ಲಿ ನಾವು ಇದ್ದೇವೆ ಎಂದು ದೂರು ಕೊಟ್ಟಿದ್ದಾರೆ. ಅದು ಸಿಸಿ ನಂ.1079/2020 ಎಂದ ಇದೆ ಎಂದರೆ ನಿಜ. ದೂರು ಕೊಡಲು ಠಾಣೆಗೆ ನಾನು, ನನ್ನ ಗಂಡ ಮತ್ತು ಮಕ್ಕಳು ಹೋದೆವು. ಪಿರ್ಯಾಧಿ ಬರೆಯಲು ಬೇರೆ ಯಾರು ಮಾಹಿತಿ ಕೊಟ್ಟಿಲ್ಲ . ಠಾಣಯಲ್ಲಿ ಹೋದಾಗ ನಮ್ಮಗಳಲ್ಲಿ ಯಾರು ಬರೆದರು ಎಂದು ಗೊತ್ತಿಲ್ಲ. ನಾನು ಆ ಪಿರ್ಯಾಧಿಗೆ ಸಹಿ ಮಾಡು ಎಂದು ಹೇಳಿದ ಮೇರೆಗ ಸಹಿ ಮಾಡಿದ್ದೇನೆ. ಪಿರ್ಯಾಧಿಯಲ್ಲಿ ಏನು ಬರೆದಿದೆ ಎಂದು ನನಗೆ ಮಾಹಿತಿ ಇಲ್ಲ ಎಂದರೆ ಸಾಕ್ಷಿ ನಾನು

ಶಾಲೆ ಕಲಿತಿಲ್ಲ ಎಂದು ಹೇಳುತ್ತಾರೆ. ಘಟನೆ ನೆಡದ ಸ್ಥಳಕ್ಕೆ ಪೊಲೀಸರು ಬಂದಿಲ್ಲ ಮತ್ತು ಯಾವುದೇ ಪಂಚನಾಮೆ ಮಾಡಿಲ್ಲ ಎಂದರೆ ಸರಿ ಅಲ್ಲ. ಆ ದಿನ ಯಾವುದೇ ಘಟನೆ ಆಗದೇ ಇದ್ದರೂ ಸಹ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿ ಅಲ್ಲ.

**ಮರುವಿಚಾರಣೆ ಇಲ್ಲಃ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ. ಸರಿ ಅದೆ.

**(ಆದಿತ್ಯ ಆರ್ ಕಲಾಲ್)**
**ಹೆಚ್ಚುವರಿ ಸಿವಿಲ್ ಹಾಗೂ ಜೆ .ಎಮ್ .ಎಫ್.ಸಿ**
**ನ್ಯಾಯಾಧೀಶರು ರೋಣ**